


# ಗಿರೀಶ ಕಾರ್ನಾಡ

19 ಮೇ 1938 – 10 ಜೂನ್ 2019

ಮೊಗೆದಷ್ಟೂ ನೀರುಕ್ಕುವ ದೊಣೆಯಂತೆ ಗಿರೀಶ ಕಾರ್ನಾಡರ ಕುರಿತ ನೆನಪುಗಳು. ಅದ್ಭುತವಾದ ರಂಗಕೃತಿಯಲ್ಲಿ, ಸಿನಿಮಾದಲ್ಲಿ, ವೈಚಾರಿಕ ಸಂಘರ್ಷದಲ್ಲಿ, ಸಾಮಾಜಿಕ ವಿವೇಕದಲ್ಲಿ, ವ್ಯಕ್ತಿತ್ವದ ಘನತೆ ಹಾಗೂ ಜೀವನಸೌಂದರ್ಯದಲ್ಲಿ ಗಿರೀಶರು ಮತ್ತೆ ಮತ್ತೆ ನೆನಪಾಗುತ್ತಲೇ ಇರುತ್ತಾರೆ. ತಮ್ಮ ನಾಟಕಗಳ ಮೂಲಕ ಕನ್ನಡ ನುಡಿಯ ಸೊಗಡು ಹೆಚ್ಚಿಸಿದ, ರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಸೊಡರು ಬೆಳಗಿದ ಕೀರ್ತಿ ಅವರದು. ಕಾರ್ನಾಡರ ನಿರ್ಗಮನದ ಹಿನ್ನೆಲೆಯಲ್ಲಿ ಅವರ ಕುರಿತ ಇಲ್ಲಿನ ಬರಹಗಳು, ಅಗಲಿದ ಧೀಮಂತನನ್ನು ನಮ್ಮೊಳಗೆ ಜೀವಂತವಾಗಿರಿಸಿಕೊಳ್ಳುವ ಮಾರ್ಗಗಳೂ ಆಗಿವೆ.

